

# ಈಜುಗಾರ್ತಿ ನಟಿಯಾಗಿದ್ದು ಆಕಸ್ಮಿಕ

**ನಂದಿನಿ ಮೂರ್ತಿ**
**ಝೀ ಕನ್ನಡ 'ಹಿಟ್ಲರ್ ಕಲ್ಯಾಣ'ದ ದುರ್ಗಾ**

◆ **ವೃತ್ತಿ ಮತ್ತು ಕುಟುಂಬಕ್ಕೆ ಸಮಯದ ಹೊಂದಾಣಿಕೆಯನ್ನು ಹೇಗೆ ಮಾಡುತ್ತೀರಿ?**

ನನ್ನ ಕುಟುಂಬದ ಸಹಕಾರ ಇದೆ. ಮೂರೂವರೆ ವರ್ಷದ ಹಿತಾ ಎಂಬ ಮಗು ಇದೆ. ಮನೆ, ಮಗು, ವೃತ್ತಿ ನಿರ್ವಹಣೆ ಕಷ್ಟ ಎಂದು 'ಹಿಟ್ಲರ್ ಕಲ್ಯಾಣ' ಒಪ್ಪುವಾಗ ಹಿಂಜರಿದಿದ್ದೆ. ಕೆಲಸಕ್ಕೆ ನಿಗದಿತ ಸಮಯ ಇರುವುದಿಲ್ಲ ಎಂದು ನನಗೆ ಗೊತ್ತಿತ್ತು. ಬೆಳಗ್ಗೆ 5.30ಕ್ಕೆ ಮನೆ ಬಿಟ್ಟರೆ ರಾತ್ರಿ 11ಕ್ಕೆ ಮನೆ ಸೇರುವುದೂ ಗೊತ್ತಿತ್ತು. ಅಪ್ಪ– ಅಮ್ಮ, ಪತಿ ಮಗುವಿನ ಕಾರಣಕ್ಕೆ ನಿರಾಕರಿಸುವುದಾದರೆ ಅದರ ಜವಾಬ್ದಾರಿ ನಾವು ತೆಗೆದುಕೊಳ್ಳುತ್ತೇವೆ ಎಂದು ಭರವಸೆ ಮಾತನ್ನಾಡಿದರು. ಹಾಗಾಗಿದ್ದರಿಂದ ಒಪ್ಪಿದೆ, ಚಿತ್ರೀಕರಣ ಇಲ್ಲದ ಸಂದರ್ಭದಲ್ಲಿ ಹೆಚ್ಚಿನ ಸಮಯ ಮಗು ಮತ್ತು ಕುಟುಂಬದ ಜೊತೆ ಕಳೆಯುತ್ತೇನೆ. ಮನೆಯವರ ಸಹಕಾರದಿಂದ ಗಮನಕೇಂದ್ರೀಕರಿಸಿ ಕೆಲಸ ಮಾಡಲು ಸಾಧ್ಯವಾಗುತ್ತದೆ.

◆ **ನೀವು ನಟಿಯಾಗಿ ನಿಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದು ಹೇಗೆ?**

ಮೂಲತಃ ನಾನು ರಂಗಭೂಮಿ ಕಲಾವಿದೆ. 2005ರಲ್ಲಿ ನಾಗಾಭರಣ ಅವರ ಬೆನಕ ತಂಡದಲ್ಲಿ ನಾಟಕಗಳನ್ನು ಆಡಿದ್ದೆ. ಧಾರಾವಾಹಿಗಳ ಬಗ್ಗೆ ನನಗೆ ಅಷ್ಟು ಒಲವು ಇರಲಿಲ್ಲ. ರಂಗಭೂಮಿಯಲ್ಲಿ ಹೆಚ್ಚಿನ ಆಸಕ್ತಿ ಇತ್ತು. 'ಅರಮನೆಯಲ್ಲಿ ರಾಜ ಹಂಸ' ಎಂಬ ನಾಟಕದಲ್ಲಿ ನನ್ನ ಅಭಿನಯ ನೋಡಿ ಅಶೋಕ್ ಕಶ್ಯಪ್ ಅವರು 'ನಂದಗೋಕುಲ' ಧಾರಾವಾಹಿಗೆ ಆಹ್ವಾನ ನೀಡಿದರು. ನನಗಿದ್ದ ರಂಗಭೂಮಿಯ ಪ್ರೀತಿ ಕಂಡು, ಅದರ ಜೊತೆ ಇದನ್ನೂ ಮಾಡಿ ಎಂದು ಮನ ಒಲಿಸಿದರು. ಅದೇ ನನ್ನ ಮೊದಲ ಧಾರಾವಾಹಿ ಅದಾದ ಮೇಲೆ ಒಂದಾದ ಮೇಲೆ ಒಂದು ಒಳ್ಳೆಯ ಪಾತ್ರಗಳು ಬಂದವು.

ಪಾತ್ರ ಆಯ್ಕೆ ಸಂದರ್ಭದಲ್ಲಿ ಒಂದು ಮಾನದಂಡ ಪಾಲಿಸುತ್ತೇನೆ. ಪಾತ್ರ ನನಗೆ ಹೊಂದಿಕೆ ಆಗಬೇಕು. ವೀಕ್ಷಕರಿಗೂ ಯಾವುದೋ ಒಂದು ರೂಪದಲ್ಲಿ ಅನ್ವಯವಾಗುವಂತೆ ಇರಬೇಕು. ನನ್ನ ವೃತ್ತಿ ಜೀವನದಲ್ಲಿ ಪ್ರತಿ ಪಾತ್ರವೂ ಭಿನ್ನವಾಗಿರಬೇಕು. ನನಗೆ ಅದು ಸವಾಲನ್ನು ಒಡ್ಡುವಂತೆ ಇರಬೇಕು. ಪಾತ್ರ ಎಂತಹದ್ದೇ ಇರಬಹುದು. ಈ ಮನಸ್ಥಿತಿಯಲ್ಲಿಯೇ ಸವಾಲಿನ ಪಾತ್ರಗಳನ್ನು ಆಯ್ಕೆ ಮಾಡಿಕೊಂಡೆ. ಒಂದಾದ ಮೇಲೆ ಒಂದು ಉತ್ತಮ ಪಾತ್ರಗಳು ನನಗೆ ಸಿಕ್ಕಿವೆ.

◆ **ಡಾಕ್ಟರ್ ಎಂಜಿನಿಯರ್ ಕನಸಿರುವ ದಿನಮಾನದಲ್ಲಿ ರಂಗಭೂಮಿ ಆಸಕ್ತಿ ಮೂಡಿದ್ದು ಹೇಗೆ?**

ಪೋಷಕರು ನನಗೆ ಸಾಮಾನ್ಯರಿಗಿಂತ ಭಿನ್ನವಾಗಿ ಇರಲು ಪ್ರೇರೇಪಿಸಿದ್ದಾರೆ. ತಂದೆ– ತಾಯಿ ಓದನ್ನು ಯಾವತ್ತೂ ನಿಲ್ಲಿಸಬೇಡ. ಜೀವನದ ಕೊನೆ ಕ್ಷಣದ ತನಕ ಅದು ನೆರವಿಗೆ ಬರುತ್ತದೆ. ಆದರೆ ನಿನ್ನನ್ನು ನೀನು ಗುರುತಿಸಿಕೊಳ್ಳಲು ಬೇರೆ ಏನಾದರೂ ಮಾಡಬೇಕು ಎಂದರು. ನಾಟಕಕ್ಕೆ ಬರುವ ಮುನ್ನ ನಾನು ಒಬ್ಬ ಈಜುಗಾರ್ತಿ. ಹೈಸ್ಕೂಲ್ ದಿನಗಳಲ್ಲಿಯೇ ರಾಜ್ಯಮಟ್ಟದಲ್ಲಿ ಚಿನ್ನದ ಪದಕ ಗೆದ್ದಿದ್ದೆ. ಅದಕ್ಕೆ ನಮ್ಮನ್ನು ನಾವು ಅರ್ಪಣೆ ಮಾಡಿಕೊಳ್ಳಬೇಕು. ನಿರಂತರವಾಗಿ ಅಭ್ಯಾಸ ಮಾಡಬೇಕು. ಬೇರೆ ಬೇರೆ ವೈಯಕ್ತಿಕ ಕಾರಣಕ್ಕೆ ಅದು ಸಾಧ್ಯ ಆಗುವುದಿಲ್ಲ ಎಂದು ಬಿಟ್ಟೆ. ನಂತರ ಬೇರೆಯವರಿಗಿಂತ ಹೇಗೆ ನಾನು ಭಿನ್ನವಾಗಿ ಕೆಲಸ ಮಾಡಲು ಸಾಧ್ಯ ಎಂದು ಯೋಚನೆಯಲ್ಲಿ ಇದ್ದಾಗ ಬೆನಕ ಸಂಸ್ಥೆಯ ಪ್ರಕಟಣೆಯೊಂದು ಪತ್ರಿಕೆಯಲ್ಲಿ ಕಾಣಿಸಿತು. ನೋಡೋಣ ಎಂದು ಸೇರಿದೆ. ಅದೂ ಆಕಸ್ಮಿಕ ಅಷ್ಟೇ. ಇಲ್ಲಿ ಸಿಕ್ಕ ಪ್ರೀತಿ ಜನಮನ್ನಣೆ ಎಲ್ಲಿಯೂ ಸಿಗಲು ಸಾಧ್ಯವಿಲ್ಲ ಎಂದು ಇಲ್ಲೇ ಕೆಲಸ ಮುಂದುವರಿಸಿದೆ.

ಈಜನ್ನು ಬಿಡಲು ಕಾರಣ ಅದು ಹೆಚ್ಚಿನ ಶ್ರಮ ಮತ್ತು ಸಮಯ ಕೇಳುತ್ತದೆ. ಅದಕ್ಕೇ ವರ್ಷಗಟ್ಟಲೇ ತಾಲೀಮು ಮಾಡಬೇಕು. ಆಗ ನಾನು ಎಸ್‌ಎಸ್‌ಎಲ್‌ಸಿ ಓದುತ್ತಿದ್ದೆ. ಅದೇ ಸಮಯದಲ್ಲಿ ನನ್ನ ತಾಯಿಗೆ ಅಪಘಾತ ಆಯಿತು. ನನ್ನ ಕೋಚ್ ಬೇರೆ ಕಡೆ ಹೋದರು. ಇದೆಲ್ಲ ಕಾರಣಗಳಿಗೆ ಬಿಡುವ ಅನಿವಾರ್ಯತೆ ಬಂತು. ಆರು ವರ್ಷ ನಿರಂತರ ಅಭ್ಯಾಸ ಮಾಡಿದ್ದೆ. ಕೆಲವೊಮ್ಮೆ ದಿನವಿಡೀ ಅಭ್ಯಾಸ ಮಾಡುತ್ತಿದ್ದೆ. ಅಷ್ಟೆಲ್ಲ ಮಾಡಿದರೂ ನಮಗೊಂದು ಅನನ್ಯತೆ ಸಿಗುವ ಯಾವ ಭರವಸೆಯೂ ಇರುವುದಿಲ್ಲ. ಅಲ್ಲಿ ಗುರುತಿಸುವ ಮಾನದಂಡ ಮೂರೇ ಮೂರು ಬಹುಮಾನಗಳು. ಹೀಗಿದ್ದರೂ ಕ್ರೀಡೆಗೆ ತುಂಬ ವರ್ಷಗಳ ತಪಸ್ಸು ಅಗತ್ಯ ಎಂದು ಗೊತ್ತಾದ ಕಾರಣ ಅದರಿಂದ ಹಿಂದೆ ಬಂದೆ.

◆ **ಹಿಟ್ಲರ್ ಮದುವೆ ವಿಷಯದಲ್ಲಿ ಅವರ ಸೊಸೆಯಾದ ನಿಮ್ಮ ಪಾತ್ರ ಏನು?**

ಲೀಲಾ ಅತ್ತೆಯಾಗಿ ಬರುವುದು ನನಗೆ ಇಷ್ಟ ಇರುವುದಿಲ್ಲ. ಅವಳು ತುಂಬ ಎಡವಟ್ಟು, ಆಕೆ ಮಾಡುವ ಕೆಲಸಗಳೆಲ್ಲವೂ ಎಡವಟ್ಟು. ನನ್ನ ಪಾತ್ರ ಹೇಗಿದೆ ಅಂದರೆ ಎಜೆ ಎಷ್ಟು ನಿಖರ ಸ್ವಭಾವಕ್ಕೆ ಸರಿ ಹೊಂದುತ್ತದೆ. ಅವರು ಯಾವುದೋ ಒಂದು ಕೆಲಸ ಹೇಳಿದರೆ ಅದನ್ನು ಮಾಡುವುದು ಯಾರು? ಎನ್ನುವ ಪ್ರಶ್ನೆ ಉದ್ಭವ ಆಗದಂತೆ ನಾನು ಮುಂದೆ ನಿಂತು ಅವರಿಗೆ ಒಪ್ಪುವ ಹಾಗೆ ನಿಖರವಾಗಿ ಕೆಲಸ ಮಾಡುತ್ತೇನೆ. ಅದರಲ್ಲಿ ಯಾವುದೇ ದೋಷ ಇಲ್ಲದಂತೆ ಇರಬೇಕು ಎಂದು ಬಯಸುತ್ತೇನೆ. ಅವರ ನಿರ್ದೇಶನದಂತೆ ಪರ್ಫೆಕ್ಟ್ ಕೆಲಸ ಮಾಡುವ ಕಮಾಂಡರ್ ರೀತಿ ಕೆಲಸ ಮಾಡುತ್ತೇನೆ. ಸ್ಪಷ್ಟತೆಯನ್ನು ನಿರೀಕ್ಷಿಸುವ ನಮ್ಮ ಕುಟುಂಬಕ್ಕೆ ಲೀಲಾನಂತಹ ಎಡವಟ್ಟು ಗುಣದವರು ನಮಗೆ ಆಕೆ ಹೊಂದಾಣಿಕೆ ಆಗುವುದಿಲ್ಲ ಎಂದು ಮನವವರಿಕೆ ಆಗಿದೆ. ಹಾಗಾಗಿ ಲೀಲಾ ಬೇಡ ಎಂದು ಹೇಳುತ್ತೇನೆ. ಈ ಸಂಬಂಧ ಅವಳಿಗೇ ಹೋಗಿ ಕೇಳಿಕೊಳ್ಳುತ್ತೇನೆ. ಅದಕ್ಕೆ ಅವಳಿಂದ ವ್ಯಕ್ತವಾಗುವ ವಿರೋಧವನ್ನೂ ಎದುರಿಸುತ್ತೇನೆ. ಶ್ವೇತಾ ಅತ್ತೆಯಾಗಿ ಬರುತ್ತಾರೆ ಎಂದು ಖಚಿತವಾಗಿದೆ. ಮುಂದೆ ಏನಾಗುತ್ತದೆಯೋ ಕಾದು ನೋಡುವ ಕುತೂಹಲ ಇದೆ.

■ **ರಾಘವೇಂದ್ರ ಕೆ.**